## ಸತ್ಯ ಸಂಗತಿಯ ಸರಳ ನಿರೂಪಣೆ

‘ಹೇಳಲಾರದು ಮನ ತಾಳಲಾರದು’ (ಮೇ 25, ಅನು ಬೆಳ್ಳೆ) ಕಥೆ ಚೆನ್ನಾಗಿ ಮೂಡಿ ಬಂದಿದೆ. ತಾಯಿ ಮನೆಯಲ್ಲಿ ಮದುವೆಯಾದ ಹೆಣ್ಣು ಮಕ್ಕಳು ಹೆಚ್ಚಿನ ದಿನವಿದ್ದರೆ ನೆರೆಹೊರೆಯವರಿಗೆಲ್ಲಾ ಕುತೂಹಲ. ಇದು ಎಲ್ಲೆಡೆ ನಡೆಯುವ ಸತ್ಯ ಘಟನೆ. ವಿಕೃತ ಮನಸ್ಸಿನ ಗಂಡನನ್ನು ಬಿಟ್ಟು ಬಂದಿದ್ದು ಒಳ್ಳೆಯದೇ ಆಯಿತು.

ಕೊನೆಗೆ ವಿದ್ಯಾವಂತೆಯಾದ ಹಂಸಿನಿ ನೌಕರಿ ಹಿಡಿದಳು ಎಂದು ಅಂತ್ಯ ಕಾಣಿಸಬಹುದಿತ್ತು. ಆದರೆ ಕಥೆಯಲ್ಲಿ ತಂದೆ ತಾಯಿ ಹೆಸರು ಹಾಗೂ ಅಣ್ಣನ ಹೆಸರು ತಿಳಿಸಬೇಕಿತ್ತು. ಕೆಲವು ಸಂಭಾಷಣೆಯಲ್ಲಿ ಯಾರೊಂದಿಗೆ ಯಾರು ಮಾತನಾಡುತ್ತಿದ್ದಾರೆ ಎಂದು ತಿಳಿಯಲಿಲ್ಲ. ಈ ಗೊಂದಲದ ನಡುವೆಯೂ ಕಥೆ ಓದಿಸಿಕೊಂಡು ಹೋಯಿತು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಹಿತವಾದ ಹಿಮಾಲಯ ಕಥನ

‘ದಯಾರ ಬುಗ್ಯಲ್— ಸ್ವರ್ಗದ ಸಾಂಗತ್ಯ ಕೊಡುವ ಹಸುರತಾಣ’ (ಮೇ 25, ಎಸ್.ಎಲ್. ರವಿಶಂಕರ್) ಪ್ರವಾಸ ಕಥನ ಬಹಳ ಸುಂದರವಾಗಿ, ಓದುಗರ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ. ಲೇಖಕರ ಬರಹದ ಶೈಲಿ ಸೊಗಸಾಗಿದೆ. ಇಂತಹ ಬರಹಗಳು ಹೆಚ್ಚೆಚ್ಚು ಪ್ರಕಟವಾಗಲಿ.

— ಎನ್.ಎಸ್. ವೆಂಕಟೇಶ ಉಡುಪ, ಬೆಂಗಳೂರು



## ‘ಅಣ್ಣಾವ್ರು’ ಎಂಬ ಸಿಹಿನೆನಪು

‘ನಂಜನಗೂಡಿನ ರಸಬಾಳೆಯೂ ಅಣ್ಣಾವ್ರ ಸಿಹಿ ನೆನಪೂ’ (ಮೇ 11, ನಾಗೇಂದ್ರ ಎಚ್. ಎಸ್.) ಸ್ವಾದ ಸ್ಮರಣೆ ಲೇಖನ ಮನ ಮೆಚ್ಚಿಸಿತು. ಮೈಸೂರಿನ ಹೋಟೆಲ್‌ನಲ್ಲಿ ಡಾ. ರಾಜಕುಮಾರ್ ಅವರ ಜೊತೆ ಊಟ ಮಾಡಿದ ಬಾಳೆಹಣ್ಣು ಅಂಗಡಿ ಮಾಲೀಕರು ಅದೆಷ್ಟು ಪುಣ್ಯವಂತರು ಎಂಬುದೇ ಸೋಜಿಗವಾಯಿತು.

—ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

## ಪರಿಸರಪ್ರಜ್ಞೆ ಮೂಡಿಸುವ ಮಕ್ಕಳ ಕಥೆ

ಹೊನ್ನಪುರದ ನದಿ ಮತ್ತು ಶರಧಿ (ಮೇ 25, ಲಲಿತಾ ಕೆ. ಹೊಸಪ್ಯಾಟಿ) ಅವರ ಎಳೆಯರ ಅಂಗಳದ ಕಥೆ ಮನಮೋಹಕವಾಗಿದೆ. ಎಳೆಯ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಎಂಬುದು ಸಾಮಾಜಿಕ ಪ್ರಜ್ಞೆಯ ಭಾಗವಾಗಿರಬೇಕು ಎಂಬ ಅರಿವನ್ನು ಮೂಡಿಸುವ ಕಥೆ ಇದಾಗಿದೆ.

—ಪಿ. ಶ್ರೀಧರ, ಲಕಮನಹಳ್ಳಿ




## ರಾಜಕೀಯ ವಿದ್ಯಮಾನ ಹಾಗೂ ‘ಸಮರಕಲೆ’

‘ಸಮರಕಲೆ; ಫಿಟ್‌ನೆಸ್ ಪ್ರಿಯರ ಹೊಸ ಗರಡಿ’, ಮೇ 25ರ ಸಂಚಿಕೆಯ ಮುಖಪುಟ, ಕಾಕತಾಳೀಯವಾಗಿ ಇತ್ತೀಚೆಗೆ ನಮ್ಮ ಕರ್ನಾಟಕದಲ್ಲಿ ನಡೆದ ರಾಜಕೀಯ ವಿದ್ಯಮಾನದ ಗೂಢ— ಗಂಭೀರ ಸಂಕೇತದಂತೆ ನನಗೆ ಕಂಡಿತು. ಅಥವಾ ಅದೇ ಗುಂಗಿನಲ್ಲಿರುವ ನಮ್ಮಂಥ ಓದುಗರ ಮನದ ಪ್ರತಿಬಿಂಬ ಎಂದರೂ ತಪ್ಪಿಲ್ಲ.

ನನಗನಿಸಿದ್ದು, ಮೂವರು— ಮಹಾಕಲಿಗಳು ಕೈ ಮುಗಿದು ಸಮರ ಕಲೆಯ ಆರಂಭದ ಭಂಗಿ ಎನ್ನುವಂತೆ ನಿಂತಿದ್ದಾರೆ ಅಥವಾ ಅರ್ಧ ಕುಳಿತಿದ್ದಾರೆ.

ಎಡಜಾಗದಲ್ಲಿ ಸಿದ್ದರಾಮಯ್ಯನವರು ಬಲಭಾಗಕ್ಕೆ ಶಿವಕುಮಾರ್, ಮೇಲೆ ಮಲ್ಲಿಕಾರ್ಜುನ ಖರ್ಗೆ.

ಸ—ಸಿದ್ದರಾಮಯ್ಯ
ಮ—ಮಲ್ಲಿಕಾರ್ಜುನ ಖರ್ಗೆ
ರ—ಶಿವಕುಮಾರ (ಅಂತ್ಯಾಕ್ಷರ)
ಕ—ಕರ್ನಾಟಕ ವಿಧಾನಸಭೆ
ಲೆ—ಲೆಕ್ಕ ಮೀರಿ ಒಂದೇ ಪಕ್ಷಕ್ಕೆ ಯಾವುದೇ ಅಡೆತಡೆ ಇಲ್ಲದೇ 135 ಆಸನಗಳು.
ಫಿಟ್‌ನೆಸ್— ಇನ್ನು ಮುಂದಾದರೂ ಫಿಟ್ ಆಗಿ ಇರಿ ಪ್ರಿಯರ— ಕನ್ನಡಿಗರ (ಕನ್ನಡಿಗರಿಗಾಗಿ) ಹೊಸ ಗರಡಿ—ಹೊಸ ಸರ್ಕಾರ.

ನನಗೆ ನಕ್ಕು ನಕ್ಕು ಸಾಕಾಯ್ತು, ಈ ರೀತಿ ಊಹಿಸಿದ್ದು...

—ಕೆ.ಎಂ. ಮಧ್ವರಾಯ,
ವಿಶ್ರಾಂತ ಕನ್ನಡ ವಾರ್ತಾವಾಚಕ,
ಆಕಾಶವಾಣಿ, ನವದೆಹಲಿ—ಬೆಂಗಳೂರು

## ಹೃದಯ ತುಂಬಿದ ಬಲರಾಮ

‘ಬಲರಾಮನ ಮಹಾ ನಿರ್ಗಮನ’ (ಮೇ 25, ಪ್ರವೀಣ ಕುಲಕರ್ಣಿ) ಸೆಲೆಬ್ರಿಟಿ ಅಂಕಣದಲ್ಲಿ ಬಲರಾಮನನ್ನು ಕಂಡು ಹೃದಯ ತುಂಬಿ ಬಂತು. ನಮ್ಮ ನಾಡಿನ ಸಂಸ್ಕೃತಿ, ಪರಂಪರೆಗೆ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಕೊಡುಗೆ ನೀಡಿದ ಅವನಿಗೆ ಸೆಲೆಬ್ರಿಟಿಯ ಸ್ಥಾನ ಕೊಟ್ಟದ್ದು ಖುಷಿಯಾಯಿತು.

—ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ

## ಮನದಲ್ಲಿ ಮುದ್ರೆ ಒತ್ತಿದ ಬರಹ

‘ಅಂಚೆಚೀಟಿಯಲ್ಲಿ ರಾಮಮುದ್ರೆ’ (ಮೇ 25, ಎನ್. ಜಗನ್ನಾಥ ಪ್ರಕಾಶ್) ಅತ್ಯುತ್ತಮ ಲೇಖನವೆನಿಸಿತು. ಇಮೇಲ್, ವಾಟ್ಸ್ಆ್ಯಪ್, ಟೆಲಿಗ್ರಾಂ, ಇನ್‌ಸ್ಟಾಗ್ರಾಂ ಭರಾಟೆಯಲ್ಲಿ, ಅಂಚೆ ಪೋಸ್ಟ್ ಕಾರ್ಡ್, ಲಕೋಟೆ, ಇನ್ಲ್ಯಾಂಡ್ ಪತ್ರ... ಮರೆತೇ ಹೋಗಿರುವ ಜನಮಾನಸಗಳಲ್ಲಿ ಮತ್ತೊಮ್ಮೆ ತನ್ನದೇ ‘ಮುದ್ರೆ’ ಒತ್ತುವಲ್ಲಿ ಲೇಖನ ಯಶಸ್ವಿಯಾಗಿದೆ.

ರಾಮಕಥೆಯ ಈ ಮಹಾಕಾವ್ಯ ಅಂಚೆಚೀಟಿಗಳಲ್ಲಿ ಪ್ರಕಟಗೊಂಡ ಪರಿ, ಆಸಿಯಾನ್ ದೇಶಗಳ ಸಂಯುಕ್ತ ಅಂಚೆಚೀಟಿ ಸರಣಿಗಳಲ್ಲಿ ರಾಮಾಯಣದ ಮೊಹರು ಪ್ರಶಂಸಾರ್ಹನೀಯ.

—ಸುಮನಾ



## ನಗು ತರಿಸಿದ ಸೂತ್ರಗಳು

‘ನೆರೆ ಮುನಿದರೆ...’ (ಮೇ 25, ಮಣ್ಣೆರಾಜು) ಮಂದಹಾಸ ಲೇಖನ ನಕ್ಕುನಗಿಸಿತು. ನೆರೆಹೊರೆಯವರೊಂದಿಗಿನ ಕಿರಿಕಿರಿ ಈಗ ನಿತ್ಯ ಸಂಗತಿ ಕೂಡ ಆಗಿಹೋಗಿದೆ. ಇಂಥ ಸಮಯದಲ್ಲಿ, ಅಕ್ಕಪಕ್ಕದವರೊಂದಿಗೆ ಸಹಬಾಳ್ವೆಯಿಂದ ಇರಲು ಲೇಖಕರು ಕೊಟ್ಟಿರುವ ಸಲಹೆ—ಸೂತ್ರಗಳು ಬಹಳ ಚೆನ್ನಾಗಿವೆ. ನಮ್ಮ ಸುತ್ತಲ ಜನರೊಂದಿಗೆ ಹೊಂದಿಕೊಂಡು ಹೋಗಬೇಕಾದ ಅನಿವಾರ್ಯತೆಯನ್ನೇ ನಗು ತರಿಸುತ್ತಾ ತಿಳಿಸಿಕೊಟ್ಟಿದ್ದಾರೆ.

—ಭಾಗೀರತಿ ಎಂ.ಪಿ., ಹುಬ್ಬಳ್ಳಿ

## ಕುತೂಹಲ ಬಿತ್ತಿದ ‘ಚಂದ್ರನ ಚೂರು’

‘ನೆರೆ ಮುನಿದರೆ’ ಮಂದಹಾಸ ಬರಹ ಸುಂದರವಾಗಿದೆ. ಅಕ್ಕಪಕ್ಕದವರೊಂದಿಗೆ ಆನಂದದಿಂದಿರಬೇಕಾದ ಅಗತ್ಯತೆಯ ಬಗ್ಗೆ ಬಹಳ ಚೆನ್ನಾಗಿ ವಿವರಿಸಿದ್ದಾರೆ. ಇದರೊಂದಿಗೆ, ‘ಚಂದ್ರನ ಚೂರು’ ಹೊಸ ಧಾರಾವಾಹಿ ಕೂಡ ಮೊದಲ ಕಂತಿನಿಂದಲೇ ಆಸಕ್ತಿಯನ್ನು ಮೂಡಿಸಿದೆ.

—ಎ.ಕೆ. ಅನಂತಮೂರ್ತಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ—ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ—ಮೇಲ್: feedback@sudha.co.in